### ಸಮಗ್ರವಾಗಿದೆ




‘ಮಗ ಸೋಮಾರಿ; ಮಗಳು ಜಾಣೆ’, ಡಾ.ಕೆ.ಎಸ್.ಪವಿತ್ರ ಅವರ ಮುಖಪುಟ ಲೇಖನ (ಸುಧಾ, ಆಗಸ್ಟ್ 16) ಸಮಗ್ರವಾಗಿದೆ. ಮಕ್ಕಳಲ್ಲಿ ಇರುವ ಹಾಗೂ ಇರಬಹುದಾದ ವ್ಯತ್ಯಾಸಗಳನ್ನು, ಅವರ ನಡವಳಿಕೆಗೆ ಕಾರಣಗಳನ್ನು ವೈಜ್ಞಾನಿಕವಾಗಿ ವಿಮರ್ಶಿಸಲು ಸಹಕಾರಿಯಾಗಿದೆ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಗಾಣಧಾಳು ರಾಮಣ್ಣ ಬೆಂಗಳೂರು, ಎಚ್.ಎಸ್. ಶೋಭಾ ಕುಮಾರಸ್ವಾಮಿ ಚಿಕ್ಕಮಗಳೂರು, ಎಚ್.ಎಸ್. ರಾಘವೇಂದ್ರ ಬೆಂಗಳೂರು, ಎ. ರಾಜಕುಮಾರ್ ವಾಣಿವಿಲಾಸಪುರ

### ಮಾಹಿತಿಪೂರ್ಣ

‘ನಿಮ್ಮೊಡನೆ’ಯಲ್ಲಿ ‘ಬಾಲಮಂದಿರಗಳು ಸುಧಾರಿಸಲಿ’ (ರಘುನಾಥ ಚ.ಹ.) ಬರಹ ಮಾಹಿತಿಪೂರ್ಣವಾಗಿದೆ.

—ಶ್ರೀನಾಥ್ ಕೊನೇಟಿ

### ಉಪಯುಕ್ತ ಮಾಹಿತಿ

‘ಅಣಬೆ; ಅದ್ಭುತ ಆಹಾರ’ (ಡಾ.ಕೆ.ಎಲ್. ಮಹದೇವಪ್ಪ) ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ.

—ಸುಂದರ್ ಬೆಂಗಳೂರು, ಜೀವಂಧರ ಕುಮಾರ ಹೋತಪೇಟ

### ಕುತೂಹಲಕರ

‘ಫಿಟ್‌ನೆಸ್’ ಅಂಕಣದಲ್ಲಿ ‘ಕ್ಯಾಲರಿಗೆ ಕಡಿವಾಣ ಹೇಗೆ?’ (ಡಾ. ಬ್ರಹ್ಮಾನಂದ ನಾಯಕ) ಬರಹ ಓದಿ ಅಚ್ಚರಿ ಆಯಿತು. ನಾವು ಬಳಸುವ ಆಹಾರದಲ್ಲಿ ಎಷ್ಟು ಕ್ಯಾಲರಿ ಇದ್ದದ್ದನ್ನು ಸೇವಿಸಬೇಕು,ಬೇಯಿಸಿದ ತರಕಾರಿಗಳಲ್ಲಿ ಎಷ್ಟು ಕ್ಯಾಲರಿ ನಮ್ಮ ದೇಹಕ್ಕೆ ದೊರೆಯುತ್ತವೆ ಎಂಬ ಕುತೂಹಲಕರ ವಿಚಾರ ಲೇಖನದಲ್ಲಿದೆ.

— ನಾರಾಯಣಯಾಜಿ ಶಿರಾಲಿ

### ಪ್ರವಾಸ ಲೇಖನ

‘ಎಂದೆಂದೂ ನವನವೀನ ನಯಾಗರ’ (ಸಂಜೀವ ಹಿರೇಮಠ) ಚಿತ್ರ–ಲೇಖನ ನೋಡಿ ಕಣ್ಣಮುಂದೆಯೇ ಜಲಪಾತ ಭೋರ್ಗರೆಯುತ್ತಿರುವಂತೆ ಭಾಸವಾಯಿತು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು
ಮ.ಕುಮಾರಸ್ವಾಮಿ ಬೆಂಗಳೂರು

### ಕೊರಳಿನ ಕರೆ

ಕೊಳಲಿನ ಕರೆ (ಟಿ. ಶ್ಯಾಮ್‌ಪ್ರಸಾದ್) ಲೇಖನ ಆಪ್ತವಾಗಿದೆ. ಅತ್ಯಂತ ಸುಶ್ರಾವ್ಯ ನಾದ ಹೊರಡಿಸುವ ಬಿದಿರಿನ ತುಂಡೊಂದು ಕಲಾವಿದ ಕೃಷ್ಣರಾಜು ಅವರ ಕೈಚಳಕದಿಂದ ಸುಮಧುರ ನಾದಮಾಧುರ್ಯ ಹೊರಡಿಸುವಂತಾಗಿರುವುದು ಅಭಿನಂದನೆಗೆ ಅರ್ಹವಾದ ಸಂಗತಿ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಆರೋಗ್ಯ ಲೇಖನ

‘ಪೆರಿಯಾರ್ಥರೈಟಿಸ್, ಮಧುಮೇಹಿಗಳ ಮೇಲೇ ಕಣ್ಣು’ ಆರೋಗ್ಯ ಬರಹ (ಉಮಾ ವೇಣೂರು) ಚೆನ್ನಾಗಿದೆ. ಮಧುಮೇಹಿಗಳನ್ನೇ ಹೆಚ್ಚಾಗಿ ಇದು ಕಾಡುತ್ತಿದ್ದರೂ ಈ ನೋವು ಶಾಶ್ವತವಲ್ಲ. ಪೆರಿಯಾರ್ಥರೈಟಿಸ್ ಅನ್ನು ಫಿಸಿಯೊಥೆರಪಿಯಿಂದ ಗುಣಪಡಿಸಬಹುದು.

—ವಿ.ಹೇಮಂತಕುಮಾರ್ ಬೆಂಗಳೂರು

### ವಯಸ್ಸಿನ ಪರಿಗಣನೆ ಇಲ್ಲ

ಆರೋಗ್ಯ ಲೇಖನ ನಲವತ್ತರ ಆಸುಪಾಸಿನಲ್ಲಿ ಇದ್ದವರ ಮೇಲೆ ಬೆಳಕು ಚೆಲ್ಲಿದೆ. ಆದರೆ ಈಗಿನ ದಿನಗಳಲ್ಲಿ ಕಾಣಿಸಿಕೊಳ್ಳುವ ರೋಗಗಳಿಗೆ ವಯಸ್ಸಿನ ಪರಿಗಣನೆಯೇ ಇರುವುದಿಲ್ಲ.

—ರಾಜಶೇಖರ ಹಾದಿಮನಿ ಧಾರವಾಡ

### ಕಥೆಗಳು ಚೆನ್ನಾಗಿವೆ

ಕಥೆ ‘ನಲ್ಲಿ ನೀರು’ (ಪಾರ್ವತಿ ಪಿಟಗಿ) ಚೆನ್ನಾಗಿದೆ. ನಲ್ಲಿಯ ನೀರಿಗೆ ಪೈಪ್ ಹಚ್ಚುವ ಇಲ್ಲವೆ ಮೋಟಾರ್ ಹಚ್ಚುವವರನ್ನು ನೋಡಿಯೂ ಸುಮ್ಮನಿರುವ ನೀರಗಂಟಿಯ ನಡೆ ಪಂಚಾಯ್ತಿಯ ಆಡಳಿತದ ಮೇಲೆ ಕ್ಷ–ಕಿರಣ ಬೀರಿದೆ. ಹಾಗೆಯೇ ಕಥೆ ‘ಬಾಹುಬಲಿಯ ಶಿಲ್ಪಿ’ (ಜಿ.ಎಸ್. ವಸಂತಮಾಲ) ಕೂಡ ತುಂಬ ಚೆನ್ನಾಗಿದೆ.

—ಕೊಹಿಮ ಬಸರಕೋಡು, ರುಕ್ಮಿಣಿ ಕೃ.ದೇಶಪಾಂಡೆ ಗೋಕಾಕ

### ‘ನಲ್ಲಿ ನೀರು’ ನಿರಾಶೆಗೊಳಿಸಿತು

‘ನಲ್ಲಿ ನೀರು’ ಕಥೆ (ಪಾರ್ವತಿ ಪಿಟಗಿ) ನಿರಾಶೆಗೊಳಿಸಿತು. ಹೆಂಗಸರ ಜಗಳದ ಉಗಮಸ್ಥಾನದಂತಿರುವ ಸಾರ್ವಜನಿಕ ನಲ್ಲಿ ನೀರಿನ ಸ್ಥಳದಲ್ಲಿನ ಜಗಳ ರಂಪಾಟವನ್ನು ಇನ್ನಷ್ಟು ಸ್ವಾರಸ್ಯಕರವಾಗಿ ಕತೆಗಾರ್ತಿ ಬರೆಯಬಹುದಾಗಿತ್ತು.

— ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ

### ಹಾಸ್ಯ ಬರಹಗಳು ಬರಲಿ

ಇತ್ತೀಚಿನ ದಿನಗಳಲ್ಲಿ ‘ಸುಧಾ’ ಕೆಲವು ವಿನೂತನ ವಿಚಾರಗಳ ಲೇಖನ ಹೊತ್ತು ತಂದು ಮತ್ತಷ್ಟು ಆಕರ್ಷಕವಾಗಿ ಬರುತ್ತಿರುವುದು ಸಂತಸದ ವಿಷಯ. ಆದರೆ ಈಗ ಹಾಸ್ಯಲೇಖನ ವಿರಳವಾಗುತ್ತಿದೆ. ಮನಸ್ಸಿಗೆ ಮುದ ನೀಡುವ ಹಾಸ್ಯ ಬರಹಗಳು ಇನ್ನೂ ಹೆಚ್ಚು ಹೆಚ್ಚು ಪ್ರಕಟವಾಗಲಿ ಎಂಬ ಅಪೇಕ್ಷೆ.

—ಅರವಿಂದ ಜಿ. ಜೋಷಿ ಮೈಸೂರು

### ಕನಿಕರವೆನಿಸಿತು

‘ನನಗೆ ನಾನೇ ಆತ್ಮ ಸಂಗಾತಿ’ (ಡಿ.ಎಂ. ಘನಶ್ಯಾಮ) ಲೇಖನ ಓದುವಾಗ ಕನಿಕರವೆನಿಸಿತು. ಉಳ್ಳವರು ಏನು ಮಾಡಿದರೂ ಟ್ರೆಂಡ್, ನ್ಯೂಸ್ ಎನ್ನುವ ಕಾಲ ಬಂದಾಗಿದೆ. ಹೀಗಾಗಿ ಸ್ವ–ಮದುವೆ ಒಂದು ವ್ಯಾಪಾರದ ಅವಕಾಶವಾಗಿರುವುದು ಅಚ್ಚರಿಯೇನಲ್ಲ.

— ಕೆ.ವಿ.ರಾಜಲಕ್ಷ್ಮಿ,ಬೆಂಗಳೂರು, ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ

### ಒಂದೇ ಲೇಖನ ಎರಡು ಪತ್ರಿಕೆಗಳಲ್ಲಿ

‘ನಿಮ್ಮ ಪುಟ’ದಲ್ಲಿ ಪ್ರಕಟವಾಗಿರುವ ತಾರಾನಾಥ್ ಮೇಸ್ತ ಶಿರೂರು ಇವರ ‘ವಿಚಿತ್ರ ಹೊಗೆ’ ಚಿತ್ರ ಬರಹ ಆಗಸ್ಟ್ 5ರ ‘ಕರ್ಮವೀರ’ದಲ್ಲಿ ಪ್ರಕಟವಾಗಿದೆ.

—ಪೂರ್ಣಿಮಾ ಆರ್. ಹೆಜಮಾಡಿ, ಸಾಂಗ್ಲಿ

### ‘ಗೋಕುಲವಾಣಿ’ ಕಥಾ ಸ್ಪರ್ಧೆ

ಮುಂಬಯಿಯ ‘ಗೋಕುಲವಾಣಿ’ ಮಾಸಪತ್ರಿಕೆ ಅಖಿಲ ಭಾರತ ಮಟ್ಟದ ಕನ್ನಡ ಕಥಾ ಸ್ಪರ್ಧೆಯನ್ನು ಆಯೋಜಿಸಿದೆ. ಕೊನೆಯ ದಿನ ಸೆಪ್ಟೆಂಬರ್ 25.
ವಿಳಾಸ: **Editor, Gokulavani, Kannada Monthly, BSKB Association, Plot No. 273, Gokul Marg, Sion (E), Mumbai 400 022. Email: gokulavani@bskba.com**


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460